ಶ್ರೀ ವೀರೇಂದ್ರ ಪಾಟೀರ್.—ಈ ಸಬ್‌ಡಿವಿಷನ್‌ಗೆ ಏನೇನು ಡ್ರೈನೇಜ್ ಸ್ಕೀಂಗಳನ್ನು ಮಾಡಬೇಕು ಎಂದು ಇನ್‌ವೆಸ್ಟಿಗೇಷನ್ ಮಾಡಲು ಜಾಯಿಂಟ್ ಇನ್‌ಸ್ಪೆಕ್ಷನ್ ಟೀಂ ಕಳುಹಿಸಬೇಕು. ಉದ್ದೇಶ ಏನೆಂದರೆ 23 ಹಳ್ಳಿಗಳನ್ನು ಷಿಫ್ಟ್ ಮಾಡುವ ಬದಲು ವಾಟರ್‌ರಾಗಿಂಗ್ ಸಲುವಾಗಿ ಏನು ಮಾಡಬೇಕು ಎನ್ನುವ ಪ್ರಾಬ್ಲಮ್ಸ್ ಅವರಿಗೆ ವಹಿಸಿದೆ.

ಶ್ರೀ ಎನ್. ಎ. ಚನ್ನೇಗೌಡ.—ಅವರು ಎಷ್ಟು ಹಳ್ಳಿಗಳನ್ನು ಷಿಫ್ಟ್ ಮಾಡುವುದಕ್ಕೆ ರೆಕಮೆಂಡ್ ಮಾಡಿದ್ದಾರೆ? ಇದನ್ನು ಜೇಬರ್ ಮುಂದೆ ಇಡುವುದಕ್ಕೆ ಆಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀರ್.—ಇಲ್ಲ. ಹಳ್ಳಿಗಳನ್ನು ಷಿಫ್ಟ್ ಮಾಡುವ ಮೊದಲು ಡ್ರೈನೇಜ್ ಸ್ಕೀಮ್ಸ್ ಏನೇನು ಮಾಡಬೇಕು ಎನ್ನುವ ಪ್ರಾಬ್ಲಮ್ಸ್‌ನ್ನು ವಹಿಸಿಕೊಟ್ಟಿದ್ದೇವೆ. ಅದನ್ನು ಎಕ್ಸಾಮಿನ್ ಮಾಡುತ್ತಾ ಇದ್ದಾರೆ. ಒಂದು ರಿಪೋರ್ಟನ್ನು ಚೀಫ್ ಇಂಜನೀಯರಿಗೂ ಕಳುಹಿಸಿ ಕೊಟ್ಟಿದ್ದಾರೆ.

SHORT NOTICE QUESTIONS AND ANSWERS

Collapse of a well in Haralalli near Ranebennur

2. **Sri B. B. SAYANAK** (Belgaum).—

Will the Chief Minister be pleased to state :—

(*a*) the number of persons that died on the spot and injured, when a well under construction at Haralalli near Ranebennur collapsed on 17th August 1968 ;

(*b*) the number of persons engaged to dig the well ;

(*c*) the depth of the well ;

(*d*) whether any compensation has been paid to the members of the bereaved family ?

A.—**Sri VEERENDRA PATIL** (Chief Minister).—

(*a*) 6 died and 4 were injured.

(*b*) 14 persons.

(*c*) About 20 feet.

(*d*) The revenue Authorities have distributed a sum of Rs. 530 and 2½ bags of grains to the bereaved families.

Sri B. B. SAYANAK.—May I know the reason for the collapse ?

† **Sri VEERENDRA PATIL.**—The reason for the collapse is that about 14 labourers were digging the well in order to get water. Earth measuring 35′ in length, 9′ in width and 20′ in depth on the southern portion of the wall suddenly slipped and fell into the bottom of the well where the labourers were engaged in digging the well. On account of it, some labourers were buried alive. On account of this, six died.

ಶ್ರೀ ಸದಾಶಿವಪ್ಪ ಪಾಟೀರ್.—ಈ ಕೆಲಸ ಮಾಡುತ್ತಾ ಇದ್ದುದು ಪ್ರೈವೇಟ್ ವರ್ಕೋ ಅಥವಾ ಗೌರ್ನಮೆಂಟ್ ವರ್ಕೋ ಯಾವುದು ಎಂದು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಯಾವನೋ ಒಬ್ಬ ರೈತ ತನ್ನ ಹೊಲದಲ್ಲಿ ಬಾವಿ ತೋಡಿಸುತ್ತಿದ್ದ. ಅದರಲ್ಲಿ 14 ಜನ ಕೆಲಸ ಮಾಡುತ್ತಾ ಇದ್ದರು. ಇದ್ದಕ್ಕಿದ್ದ ಹಾಗೆ ಮಣ್ಣು ಸ್ಲಿಪ್ ಆಗಿ ಅವರ ಮೈಮೇಲೆ ಬಿದ್ದು 6 ಮಂದಿ ಮೃತಪಟ್ಟು 4 ಮಂದಿ ಗಾಯಗೊಂಡರು.

ಶ್ರೀ ಎಂ. ನಾಗಪ್ಪ.—ಮೃತಪಟ್ಟವರ ಕುಟುಂಬಗಳಿಗೆ 530 ರೂಪಾಯಿಗಳು ಹಾಗೂ ಎರಡೂವರೆ ಮೂಟೆಗಳಷ್ಟು ಆಹಾರ ಧಾನ್ಯಗಳನ್ನು ರೆವಿನ್ಯೂ ಅಧಿಕಾರಿಗಳು ಹಂಚಿರುವುದು ನಿಜವೇ? ಇದು ಒಬ್ಬ ಮನುಷ್ಯನ ಜೀವನದ ಬೆಲೆ 530 ರೂಪಾಯಿ ಕಟ್ಟಿದ ಹಾಗೆ ಇದೆ! ಆದುದರಿಂದ ಇದಕ್ಕೆ ಸರಿಯಾದಂಥ ಕಾಂಪನ್ಸೇಷನ್ ಕೊಟ್ಟಿದ್ದೀರಾ? ನಿಯಮಗಳಲ್ಲಿ ಅದಕ್ಕೆ ಅವಕಾಶ ಇಲ್ಲದೇ ಹೋದರೆ ರೂಲ್ಸನ್ನು ತಿದ್ದುಪಡಿ ಮಾಡಲಿಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಯಾವನೋ ಒಬ್ಬ ರೈತ ತನ್ನ ಹೊಲದಲ್ಲಿ ಬಾವಿ ತೋಡಿಸಲು ಕೂಲಿಗಾರರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಾ ಇದ್ದ. ಹಾಗೆ ಮಾಡುತ್ತಾ ಇರುವಾಗ ಅವರ ಮೈಮೇಲೆ ಮಣ್ಣು ಸ್ಲಿಪ್ ಆಗಿ ಮೃತಪಟ್ಟವರಿಗೆ ಅಲ್ಲಿಯ ಅಧಿಕಾರಿಗಳೇ ಸ್ಥಾನೀಕವಾಗಿ ಕೆಲವು ಜನರಿಂದ 530 ರೂಪಾಯಿಗಳನ್ನು ಹಾಗೂ 2½ ಮೂಟೆಯಷ್ಟು ಆಹಾರಧಾನ್ಯಗಳನ್ನೂ ಕರೆಕ್ಟ್ ಮಾಡಿ ಹಂಚಿರುತ್ತಾರೆ. ಅಷ್ಟೇ ಹೊರತು ಇನ್ನು ಏನೂ ಇಲ್ಲ.

ಶ್ರೀ ಇ.ಪುಂಡಲೀಕಪ್ಪ.—ಸ್ವಾಮಿ, ಹಿಂದುಳಿದ ಜಾತಿಗಳಲ್ಲಿ ಬಹಳವಾಗಿ ಹಿಂದುಳಿದ ವಾಲ್ಮೀಕಿ ಜಾತಿಯವರೂ ಇರುವುದರಿಂದ, ಸರ್ಕಾರದವರು ತಮ್ಮ ಸಹಾನುಭೂತಿ ತೋರಿಸಿ ಇನ್ನೂ ಅವರಿಗೆ ಸಹಾಯ ಮಾಡಲು ಮನಸ್ಸು ಮಾಡುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಸರ್ಕಾರ ಸಹಾಯ ಮಾಡಬೇಕೆಂದು ಇಲ್ಲಿಯವರೆಗೂ ಕೇಳಿಲ್ಲ. ಅಲ್ಲಿಯ ಜನರು ಕಷ್ಟ ನೋಡಿಕೊಂಡು, ದುಡ್ಡು ಕರೆಕ್ಟ್ ಮಾಡಿ ಧಾನ್ಯ ಕರೆಕ್ಟ್ ಮಾಡಿ ಹಂಚಿದ್ದಾರೆ. ಬಹುಶಃ ಸರ್ಕಾರದವರು ಸಹಾಯ ಮಾಡಬೇಕೆಂದಿದ್ದರೆ, ರೂಲ್ಸ್ ಪರ್ಮಿಟ್ ಮಾಡಿದರೆ, ಆ ರೀತಿ ಅಲ್ಲಿಂದ ವರದಿ ಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

Development of Ports in the State—Indo-Pol Consultants

3. Sri H. N. NANJE GOWDA (Arkalgud).—

Will the Minister of State for Fisheries and Ports be pleased to state :—

(*a*) whether discussions were held at Bangalore on 12th August 1968 between the Indo-Pol consultants and officers of the State Government to find out the possibilities of developing ' ports ' in the State by entering into a ' Barter deal ' with Poland ;

(*b*) whether any report has been submitted to the State Government by the Indo-Pol consultants on the said matter ;

(*c*) whether the State Government have submitted any draft agreement in the matter to the Union Government for approval ;

(*d*) the names of the ports that are to be developed under the said deal and the probable cost on each one of these ports ?

A.—Sri H. C. LINGA REDDY (Minister of State for Fisheries and Ports).—

(*a*) Yes.

(*b*) No.

(*c*) No.